**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.343/2019**

**(ಚಾ.ಸಾ.3/ಪ್ರಾ.ಸಾ.3)**

ತಾಃ15-02-2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ರವಿಶೇಖರ್ |
| ತಂದೆಯ ಹೆಸರು | ಲೇಟ್ ಹನುಮಯ್ಯ |
| ವಯಸ್ಸು | 45 ವರ್ಷ |
| ಉದ್ಯೋಗ | ಚಾಲಕ |
| ವಾಸ ಸ್ಥಳ | ಸೋಮನಹಳ್ಳಿ, ಬೆಂಗಳೂರು |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

1. ನ್ಯಾಯಾಲಯದ ಮುಂದೆ ಹಾಜರಿರುವ 1 ರಿಂದ 3, 5, 7 ರಿಂದ A9 ಮತ್ತು 11 ಆರೋಪಿತರ ಪರಿಚಯ ಇಲ್ಲ. ಮೃತಪಟ್ಟ ಮಂಜುನಾಥ್ ಇವರ ಪರಿಚಯ ಇಲ್ಲ. ನಾನು ಚಾಲಕ ವೃತ್ತಿ ಮಾಡುತ್ತೇನೆ. ನಾನು ಯಾವುದೇ ಸಮಯದಲ್ಲಿ ಸಿಮೆಂಟ್ ಇಟ್ಟಿಗೆ ತಯಾರು ಮಾಡುವ ಕಾರ್ಖಾನೆ ಹೊಂದಿರಲಿಲ್ಲ. ಮಂಜುನಾಥ್ ಇವರು ಯಾವ ರೀತಿ ಮೃತಪಟ್ಟಿರುತ್ತಾರೆಂದು ನನಗೆ ತಿಳಿದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

1. ಈ ಘಟನೆ ಆದ ಸಮಯದಲ್ಲಿ ನಾನು ಜಯರಾಮ್ ಇವರಿಗೆ ಸೇರಿದ ಸೋಮನಹಳ್ಳಿಯಲ್ಲಿರುವ ಸರ್ವೆ ನಂ.181 ರ ಜಮೀನನ್ನು ಬಾಡಿಗೆಗೆ ಪಡೆದು ಸಿಮೆಂಟ್ ಇಟ್ಟಿಗೆ ತಯಾರು ಮಾಡುವ ಕಾರ್ಖಾನೆ ನಡೆಸುತ್ತಿದ್ದೆನು ಎಂದರೆ ಸರಿಯಲ್ಲ. ಮೃತ ಮಂಜುನಾಥ್ ಇವರು ದಿನಾಂಕ 31-08-2018 ಕ್ಕಿಂತ 1 ವಾರದ ಹಿಂದೆ ನಮ್ಮ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದ್ದರು ಎಂದರೆ ಸರಿಯಲ್ಲ. ದಿನಾಂಕ 31-08-2018 ರಂದು ನಮ್ಮ ಇಟ್ಟಿಗೆ ಕಾರ್ಖಾನೆಯಲ್ಲಿ ಪೂಜೆ ಇಟ್ಟುಕೊಂಡಿದ್ದ ಕಾರಣ ನಮ್ಮ ಕೆಲಸಗಾರರಿಗೆ ಬರಲು ತಿಳಿಸಿದ್ದು, ಮೃತ ಮಂಜುನಾಥ್ ಕೂಡ ಬಂದು ಪೂಜೆ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆ ದಿನ ಮಧ್ಯಾಹ್ನ 12ಃ30 ಕ್ಕೆ 6 ಜನ ಹುಡುಗರು ಬೈಕ್ ನಲ್ಲಿ ಬಂದು ಮಂಜುನಾಥ್ ಇವರನ್ನು ಮಾತನಾಡಿಸುತ್ತಿದ್ದು, ಅವರು ಯಾರು ಎಂದು ನಾನು ಕೇಳಿದಾಗ ಒಬ್ಬ ಹುಡುಗನನ್ನು ತೋರಿಸಿ ಆತ ತನ್ನ ಭಾವ ಶ್ರೀನಿವಾಸ್ ಆಗಿದ್ದು, ಉಳಿದವರು ರಾಜ, ಗೋವಿಂದರಾಜ, ಪುಟ್ಟರಾಜು ಆಗಿದ್ದು, ತನ್ನ ಭಾಮೈದುನರಾಗಿದ್ದು, ಉಳಿದವರು ಅವರ ಸ್ನೇಹಿತರು ಎಂದು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ನಂತರ ಸದರಿ ಹುಡುಗರು ಮಂಜುನಾಥ್ ಜೊತೆ ಮಾತನಾಡಬೇಕೆಂದು ಕರೆದಾಗ ಮಂಜುನಾಥ್ ನನಗೆ ವಿಚಾರ ತಿಳಿಸಿ ಅವರ ಜೊತೆ ಬೈಕ್ ನಲ್ಲಿ ಹೋದರು ಎಂದರೆ ನನಗೆ ತಿಳಿದಿಲ್ಲ.

2. ಮಂಜುನಾಥ್ ವಾಪಸ್ ಮನೆಗೆ ಬಾರದಿದ್ದ ಕಾರಣ ಮಿಸ್ಸಿಂಗ್ ಕಂಪ್ಲೆಂಟ್ ನೀಡಿದ್ದು, ನಂತರ ಅವರ ಭಾಮೈದ ಚಾಸಾ.2 ಶ್ರೀನಿವಾಸ್ ಇವರು ಆ ದಿನ ಮಂಜುನಾಥ್ ಇವರನ್ನು ಬೈಕ್ ನಲ್ಲಿ ಕರೆದುಕೊಂಡು ಹೋಗಿದ್ದ ವ್ಯಕ್ತಿಗಳು ಹಳೇ ದ್ವೇಷದಿಂದ ಮಂಜುನಾಥ್ ಇವರನ್ನು ಚಿನ್ನಕುರ್ಚಿ ದೊಡ್ಡಕಾಡು ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಆತನ ಮೇಲೆ ಹಲ್ಲೆ ಮಾಡಿ ಮಚ್ಚಿನಿಂದ ಕತ್ತರಿಸಿ ತಲೆ ಮೇಲೆ ಕಲ್ಲು ಹಾಕಿ ಕೊಲೆ ಮಾಡಿ ಮೃತ ದೇಹವನ್ನು ಪ್ಲಾಸ್ಟಿಕ್ ಹಾಗೂ ಗೋಣಿ ಚೀಲಗಳಲ್ಲಿ ಹಾಕಿ ಮೂಟೆ ಕಟ್ಟಿ ಸಂತೋಷನ ಓಮಿನಿ ಕಾರಿನಲ್ಲಿ ಚಿಕ್ಕಕುಂಟನ ಹಳ್ಳಿ ಬಳಿ ಇರುವ ವೃಷಭಾವತಿ ನದಿಯ ಗಲೀಜು ನೀರಿಗೆ ಹಾಕಿದ್ದರು ಎಂದು ನನಗೆ ತಿಳಿದುಬಂತು ಎಂದರೆ ಸರಿಯಲ್ಲ. ಮೃತ ಮಂಜುನಾಥ್ ಇವರು ನಮ್ಮ ಇಟ್ಟಿಗೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದು, ಆ ದಿನ ನಮ್ಮ ಕಾರ್ಖಾನೆಗೆ ಚಾಸಾ.2 ರವರೊಂದಿಗೆ ಬಂದಿದ್ದ 6 ಜನ ಹುಡುಗರು ನ್ಯಾಯಾಲಯದಲ್ಲಿ ಹಾಜರಿರುವ ವಿಚಾರ ನನಗೆ ತಿಳಿದಿದ್ದು, ಆರೋಪಿತರು ಮಂಜುನಾಥ್ ನನ್ನು ಕೊಲೆ ಮಾಡಿರುವ ವಿಚಾರ ನನಗೆ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಘಟನೆಗೆ ಸಂಬಂಧಿಸಿದಂತೆ ನಾನು ದಿನಾಂಕ 03-09-2018 ರಂದು ಪೊಲೀಸ್ ಠಾಣೆಗೆ ಹೋಗಿ ಈಗ ಓದಿ ಹೇಳಿದ ಹೇಳಿಕೆಯಂತೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸಿದ್ದು ಸದರಿ ಹೇಳಿಕೆಯ ಭಾಗವನ್ನು ನಿಪಿ.5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಪರ ಶ್ರೀ.ಎಮ್.ಎಲ್.ವಕೀಲರಿಂದಃ</u>**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರುವಿಚಾರಣೆಃಇಲ್ಲ</u>**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.